# PLUS TWO SAMPLE QUESTION PAPER

## SUBJECT: KANNADA (OPTIONAL)

# SET 1

# Sample Question paper – (Kannada Optional)

## 1. Weight to Unit / Content and Learning Outcome

| ಕ್ರ.ಸ | ಘಟಕ | ಕಲಿಕಾ ಸಾಧನೆಗಳು | ಅಂಕಗಳು | ಶೇಕಡಾ |
|---|---|---|---|---|
| 1 | ಹಳೆಗನ್ನಡ ನುಡಿಬೆಡಗು | 1.1,1.3,1.4,1.5 | 21 | 26.25 |
| 2 | ನಡುಗನ್ನಡ ಕಾವ್ಯ ಸೌರಭ | 2.1,2.2,2.4,2.5,2.6 | 22 | 27.50 |
| 3 | ಹೊಸಗನ್ನಡ ಗದ್ಯವಿಹಾರ | 3.1,3.2,3.3,3.4,3.6,3.7,3.8 | 34 (–8)=26 | 32.50 |
| 4 | ನಾಟಕ ರಂಗ | 4.3,4.4,4.5,4.6 | 19 (–8)=11 | 13.75 |
| | TOTAL | | 96–16=80 | 100 |

## Sample Question paper – (Kannada Optional)

# 2.Weight to Thinking Skills

| Sl.No. | Thinking Skills | Score | Percentage |
|---|---|---|---|
| 1 | Conceptual understanding | 48 | 60 |
| 2 | Conceptual generation | 32 | 40 |
| | | 80 | 100 |

## Sample Question paper – (Kannada Optional)

# 3. Weight to Type of Questions

| Sl.No | Type | No.of Questions | Score | Percentage |
|---|---|---|---|---|
| 1 | Objective | 12 | 12 | 15 |
| 2 | Short Answer | 12 | 52 | 65 |
| 3 | Essay | 2 (4-2) | 16 (32-16) | 20 |
| | Total | 26 | 80 | 100 |

# Sample Question paper – (Kannada Optional)

## 4.Blue Print ಕನ್ನಡ ಮಾದರಿ ಪ್ರಶ್ನೆ ಪತ್ರಿಕೆ–ನೀಲ ನಕ್ಷೆ

| ಕ್ರ.ಸ. | Thinking Skills<br><br>Content | Thinking Skills Conceptual Understanding | | | Thinking Skills Conceptual Generation | | | TOTAL |
|---|---|---|---|---|---|---|---|---|
| | | OBJ | S A | ESSAY | OBJ | S A | ESSAY | |
| 1 | ಸಲಿಸುವೆಂ ನೂರುವರಂ | 1 (1) | 4(1) | | | 4(1) | | 4 |
| 2 | ಶ್ರೀಮತೀ ಸ್ವಯಂವರ | 1(1) | 3(1) | | 1(1) | | 8(1) | 5 |
| 3 | ಇಳೆಯಾಂಡಗುಡಿಮಾರರ ರಗಳೆ | 1(1) | | | | 5(1) | | 2 |
| 4 | ಧರೆ ಮೆಚ್ಚದಣ್ಣ ಸೋದರರ ಕಾಳೆಗಕೆ | | 5(1) | | 1(1) | | | 6 |
| 5 | ಉಲ್ಲಘಿಸುವರುಂಟೆ ವಿಧಿಕೃತವನು | 1(1) | | 8(1) C | 1(1) | | | 1 |
| 6 | ಕಾಡಿಗೆ ಹೊದ್ದಿಸಿದ ಮಂಜಿನ ಪರದೆ | 1(1) | | 8(1) | | | | 5 |
| 7 | ಹರಳುಗಟ್ಟಿದ ಬಗೆ | | 5(1) | | 1(1) | 5(1) | | 2 |
| 8 | ಇಡ್ಲಿಯ ಇತಿಹಾಸ | 1(1) | | | | | | 4 |
| 9 | ಪ್ರಾಚೀನ ತುಳು ಸಾಹಿತ್ಯ | | 2(1)<br>5(1) | | | | | 2 |
| 10 | ಭಾಷೆ ಮತ್ತು ಭಾಷಾ ವಿಜ್ಞಾನ | 1(1) | 4(1) | | | 5(1) | | 9 |
| 11 | ಕನ್ನಡದಲ್ಲಿ ನಾಟಕ ಸಾಹಿತ್ಯ | | | | 1(1) | | 8(1) C | 5 |
| 12 | ಮಂಥರಾ | | 5(1) | | | | | 2 |
| | | | | 16–8 | | | 16–8 | 96–16 |
| | | 7 | 33 | 8 | 5 | 19 | 8 | 80 |
| | TOTAL | 48 | | | 32 | | | 80 |

# HSE II – SAMPLE QUESTION PAPER

# SUBJECT - KANNADA (OPTIONAL)

Time : 2.30 Hrs

Cool of time : 15 Mnts

Max. Markls : 80

**ಸೂಚನೆಗಳು**

- **15 ನಿಮಿಷಗಳ 'ಕೂಲ್ ಆಫ್ ಟೈಮ್' ನೀಡಲಾಗಿದೆ. ಉತ್ತರ ಬರೆಯಲು ಎರಡೂವರೆ ಗಂಟೆಗಳ ಕಾಲಾವಕಾಶವಿದೆ.**
- **'ಕೂಲ್ ಆಫ್ ಸಮಯ'ದಲ್ಲಿ ವಿದ್ಯಾರ್ಥಿಗಳು ಉತ್ತರಗಳನ್ನು ಬರೆಯುವುದಾಗಲಿ ಇತರರೊಂದಿಗೆ ಚರ್ಚಿಸುವುದಾಗಲಿ ಮಾಡಬಾರದು.**
- **ಉತ್ತರಗಳನ್ನು ಬರೆಯುವುದಕ್ಕೆ ಮೊದಲು ಪ್ರಶ್ನೆಗಳನ್ನು ಸೂಕ್ಷ್ಮವಾಗಿ ಓದಿರಿ.**
- **ಎಲ್ಲಾ ಪ್ರಶ್ನೆಗಳು ಕಡ್ಡಾಯವಾಗಿವೆ. ಅವುಗಳಲ್ಲಿ ಆಯ್ಕೆಗಳಿದ್ದರೆ ಯಾವುದಾದರೂ ಒಂದನ್ನು ಉತ್ತರಿಸತಕ್ಕದ್ದು.**
- **ನೀವು ಒಂದು ಪ್ರಶ್ನೆಯನ್ನು ಆಯ್ಕೆ ಮಾಡಿದಾಗ ಅದರದ್ದೇ ಆದ ಬಿಡಿ ಪ್ರಶ್ನೆಗಳನ್ನು ಉತ್ತರಿಸಬೇಕು.**

**(1ರಿಂದ 12ರ ವರೆಗಿನ ಪ್ರತಿಯೊಂದು ಪ್ರಶ್ನೆಗೂ ಉತ್ತರಿಸಿರಿ.)**

1. ಕನ್ನಡದ ಆದಿ ಕವಿ ಯಾರು? (1)

   (ರನ್ನ, ಪೊನ್ನ, ಜನ್ನ, ಪಂಪ)

2. ಅಕ್ಷರಪಲ್ಲಟಕ್ಕೆ ಉದಾಹರಣೆ ಯಾವುದು? (1)

   (ಅಗಸ, ದಾಟು, ಹಲಸು, ಅಡಿಕೆ)

3. ಈ ಕೆಳಗಿನವುಗಳಲ್ಲಿ ಯಕಾರಾಗಮ ಸಂಧಿಗೆ ಉದಾಹರಣೆ ಯಾವುದು? (1)

   (ಮೇರೆದಪ್ಪಿದ, ಹೊರೆಯೇರು, ಹೊಸತೆನಿಪ, ಮನಗುಂದು)

4. 'ಉಲ್ಲಂಘಿಸುವರುಂಟೆ ವಿಧಿಕೃತವನು' – ಎಂಬ ಕಾವ್ಯಭಾಗವನ್ನು ಯಾವ ಕೃತಿಯಿಂದ ಆಯ್ದುಕೊಳ್ಳಲಾಗಿದೆ?. (1)

(ವಿಕ್ರಮಾರ್ಜುನ ವಿಜಯ, ಭರತೇಶ ವೈಭವ, ಜೈಮಿನಿ ಭಾರತ, ಶ್ರೀ ರಾಮಾಶ್ವಮೇಧ)

**(5ರಿಂದ 12ರ ವರೆಗಿನ ಪ್ರಶ್ನೆಗಳನ್ನು ಸೂಚನೆಯಂತೆ ಉತ್ತರಿಸಿರಿ.)**

5. 'ಹರೆಯ, – ಈ ಪದದ ಸಂಸ್ಕೃತ ರೂಪವನ್ನು ಬರೆಯಿರಿ. (1)

6. 'ಪ್ರತಿಫಲಾಪೇಕ್ಷೆ' – ಈ ಪದವನ್ನು ಬಳಸಿ ವಾಕ್ಯವೊಂದನ್ನು ರಚಿಸಿರಿ. (1)

7. 'ಕಾಣಿಸು' – ಈ ಪದದ ನಿಷೇದಾರ್ಥಕ ರೂಪವನ್ನು ಬರೆಯಿರಿ. (1)

8. 'ಮಾತುಗಾರ' – ಇಲ್ಲಿರುವ ತದ್ದಿತ ಪ್ರತ್ಯಯವನ್ನು ಗುರುತಿಸಿರಿ. (1)

9. 'ಹೊಂದಾವರೆ' – ಈ ಪದವನ್ನು ವಿಗ್ರಹಿಸಿ ಬರೆಯಿರಿ. (1)

10. ಅನ್ಯಭಾಷಾ ಸ್ವೀಕರಣಕ್ಕೆ ಒಂದು ಉದಾಹರಣೆ ನೀಡಿರಿ. (1)

11. 'ಕುದುರೆ' – ಇದರ ಪರ್ಯಾಯ ಪದಗಳನ್ನು ಬರೆಯಿರಿ. (1)

12. ಕಣ್ಪೊಗರನಿರ್ವರೊಳು – ಈ ಪದವನ್ನು ವಿಂಗಡಿಸಿ ಬರೆಯಿರಿ. (1)

**(ಸೂಚನೆಯಂತೆ ಉತ್ತರಿಸಿರಿ.)**

13. 'ಅಡ್ಕ ಮತ್ತು ಪಾಡಿ' ಎಂಬ ಪದಗಳಿಂದ ಕೊನೆಗೊಳ್ಳುವ ನಾಲ್ಕು ನಾಲ್ಕು ಸ್ಥಳನಾಮಗಳನ್ನು ಪಟ್ಟಿಮಾಡಿರಿ? (2)

14. ಕೆಳಗಿನ ಸಾಲನ್ನು ಶಿಷ್ಟಗನ್ನಡಕ್ಕೆ ಪರಿವರ್ತಿಸಿ ಬರೆಯಿರಿ. (3)

*"ಅಕ್ಕುಂ, ಲೋಕದೊಳ್ ಮಹಾತ್ಮರೆನಿಪರೊಳನೇಕರ್ ಮಾಯಾವಿಗಳೊಳರ್. ಅಂತಪ್ಪವರೊಳಾರೊ ಕನ್ನೆಯಂ ಕಳ್ದುಯ್ದಿರವೇಳ್ಕುಮಲ್ಲದೆ ಎನ್ನಿನಾದ ಕಜ್ಜಮಲ್ತು".*

15. ಕತ್ತರಿಸಲ್ಪಟ್ಟ ಶಿಶುಪಾಲನ ರುಂಡದ ಭಾವವಿಶೇಷವು ಕೆಳಗಿನ ಸಾಲುಗಳಲ್ಲಿ ಹೇಗೆ ಪ್ರಕಟವಾಗಿದೆ. (4)

*ಮುಳಿದು ತನಗರ್ಘ್ಯವೆತ್ತಿದ*

*ತಳಿಗೆಯೊಳಿಡೆ ತೆಜೆದ ತೆಜದೆ ತಲೆ ಪಜೆದಾಗಳ್*

*ಕಳಕಳಿಸಿ ನಗುತಮಿರ್ದುದು*

*ತಳಿಗೆಯ ಮೇಲಸೂರನದಟದೇನಚ್ಚರಿಯೋ*

16. ಕೆಳಗಿನ ಪದಗಳನ್ನು ಅಕಾರಾದಿಯಾಗಿ ಬರೆದು ಅರ್ಥವನ್ನು ತಿಳಿಸಿರಿ. (4)

ಅಳವು, ಎಸೆ, ಲಲಾಟ, ತುಂಗ, ಸಲಿಲ, ಭೂವರ, ನಾಂದಿ, ಧರೆ

17. ಕೆಳಗೆ ನೀಡಿರುವ ಸಾಲುಗಳಿಗೆ ಪ್ರಸ್ತಾರ ಹಾಕಿ, ಗಣವಿಭಾಗ ಮಾಡಿ ಛಂದಸ್ಸನ್ನು ಹೆಸರಿಸಿರಿ (4)

ಮೀನಾವೆ ಪಂದಿಎಂದೆನಿ

ತಾನುಂ ತೆಜಿನಾಗಿ ಡೊಂಬ ನಿದ್ದೆಯನಾಡಲ್

18. ಕೆಳಗೆ ಕೊಡಲಾದ ಪದ್ಯಭಾಗದಲ್ಲಿ ಬಳಕೆಯಾದ ಅಲಂಕಾರವನ್ನು ಗುರುತಿಸಿ ಲಕ್ಷಣವನ್ನು ಬರೆಯಿರಿ. (5)

ಗರುಡಮಂತ್ರಕೆ ವಿಷವಿಳಿವಂತೆ ಭರತ ಭೂ
ವರನ ವಾಕ್ಯವ ಕೇಳಲಾಗಿ
ಜರಿಜರಿದಂಗಜಗೆತ್ತಿದ್ದ ಕೋಪ ಪೈ
ಸರಿಸಿತು ಹೃದಯ ತಂಪಾಯ್ತು

19. ಕೆಳಗಿನ ಗದ್ಯಭಾಗವನ್ನು ಕನ್ನಡಕ್ಕೆ ಭಾಷಾಂತರಿಸಿರಿ. (5)

*Health is one of the graces of God, the Almighty. Everyone must express gratitude to him. Protection of health is the responsibility of every individual. Liquor and narcotics are the enemies of individuals, families and society.*

**(20ರಿಂದ 24ರ ವರೆಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ.)**

20. ತುಳು ಭಾಷೆಯಲ್ಲಿ ಶಿಷ್ಟ ಸಾಹಿತ್ಯರಚನೆ ವಿಪುಲವಾಗಿ ಮೂಡಿಬರದೇ ಇರುವುದಕ್ಕೆ ಲೇಖಕರು ನೀಡುವ ಕಾರಣಗಳೇನು?(5)

21. ಮಂಥರೆಯ ಪಾತ್ರಚಿತ್ರಣ ನೀಡಿರಿ. (5)

22. ಭಾಷಾಪ್ರಭೇಧಗಳು ಉಂಟಾಗಲು ಕಾರಣವೇನು? ಉದಾಹರಣೆ ಸಹಿತ ವಿವರಿಸಿರಿ. (5)

23. ಇಳೆಯಾಂಡಗುಡಿಮಾರನ ಶಿವಭಕ್ತಿಯ ಕುರಿತು ಲೇಖನ ಬರೆಯಿರಿ. (5)

24. ಸಮಾಜದಲ್ಲಿ ಸ್ತ್ರೀಯರು ಉದ್ಯೋಗ ಕ್ಷೇತ್ರದಲ್ಲಿ ಅನುಭವಿಸುತ್ತಿರುವ ಸಮಸ್ಯೆಗಳ ಕುರಿತು ಪ್ರಬಂಧ ಸಿದ್ಧಪಡಿಸಿರಿ (5)

**(25 ಮತ್ತು 26ನೇ ಪ್ರಶ್ನೆಗಳಲ್ಲಿ ಒಂದೊಂದನ್ನು ಆಯ್ದು ಒಂದೂವರೆ ಪುಟಕ್ಕೆ ಮೀರದಂತೆ ಬರೆಯಿರಿ.)**

25. 'ಶ್ರೀಮತಿ ಸ್ವಯಂವರ ಎಂಬ ಗದ್ಯಭಾಗದಲ್ಲಿ ಅಡಕವಾಗಿರುವ ಕಥೆಯ ಸಾರವನ್ನು ಬರೆಯಿರಿ. (8)

ಅಥವಾ

'ಉಲ್ಲಂಘಿಸುವರುಂಟೆ ವಿಧಿಕೃತವನು' ಎಂಬ ಕಾವ್ಯಭಾಗದ ಆಶಯವನ್ನು ಬರೆಯಿರಿ.

26. ನೀವು ಕೈಗೊಂಡ ಪ್ರವಾಸದ ಅನುಭವಗಳನ್ನು ಕುರಿತು ವಿಶದೀಕರಿಸಿರಿ. (8)

ಅಥವಾ

ಕನ್ನಡದಲ್ಲಿ ನಾಟಕ ಸಾಹಿತ್ಯ ಬೆಳೆದು ಬಂದ ರೀತಿಯನ್ನು ಪಠ್ಯಭಾಗದ ಆಧಾರದಲ್ಲಿ ವಿವರಿಸಿರಿ.

# ANSWER KEY / VALUE POINTS

| Q. No. | Answer Key / Value Points | Score | Total |
|---|---|---|---|
| 1. | ಪಂಪ | 1 | 1 |
| 2. | ಅಗಸ | 1 | 1 |
| 3. | ಹೊರೆಯೇರು | 1 | 1 |
| 4. | ಜೈಮಿನಿ ಭಾರತ | 1 | 1 |
| 5. | ಪ್ರಾಯ | 2 | 2 |
| 6. | ಕೆಲವರು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಸೇವೆ ಸಲ್ಲಿಸುವರು. ಈ ರೀತಿಯ ಅರ್ಥಪೂರ್ಣವಾದ ವಾಕ್ಯ ರಚನೆಗೆ | 1 | 1 |
| 7. | ಕಾಣಿಸದು | 1 | 1 |
| 8. | ಗಾರ | 1 | 1 |
| 9. | ಹೊನ್ನಿನ ತಾವರೆ | 1 | 1 |
| 10. | ಸಮರ, ಭರಣ ಇತ್ಯಾದಿ ಯಾವುದೇ ಸೂಕ್ತ ಪದಗಳಿದ್ದರೆ | 1 | 1 |
| 11. | ಹಯ, ವಾಜಿ, ಅಶ್ವ . . . ಯಾವುದಾದರೂ ಎರಡನ್ನು ಬರೆದಿದ್ದರೆ | 1 | 1 |
| 12. | ಕಣ್ + ಪೊಗರಲ್ + ಇರ್ವರೊಳಂ | 1 | 1 |
| 13. | ಅಡ್ಕ — ಪಾಡಿ<br>ಬದಿಯಡ್ಕ — ಆಲಂಪಾಡಿ<br>ಬಂದಡ್ಕ — ದೇಲಂಪಾಡಿ<br>ಏತಡ್ಕ — ತಲಪಾಡಿ<br>ಕಾರಡ್ಕ — ನುಳ್ಳಿಪಾಡಿ | 2 | 2 |
| 14. | ಹೌದು. ಪ್ರಪಂಚದಲ್ಲಿ ಮಹಾತ್ಮರೆನಿಸಿಕೊಂಡವರಲ್ಲಿ ಅನೇಕರು ಮಾಯಾವಿಗಳಿರುವರು, ಅಂಥವರಲ್ಲಿ ಯಾರೋ ಕನ್ಯೆಯನ್ನು ಕದ್ದೊಯ್ದಿರಬೇಕು, ಅಲ್ಲದೆ ನನ್ನಿಂದಾದ ಕೆಲಸವಲ್ಲ ಇದು. | 3 | 3 |
| 15. | ತನಗೆ ಅರ್ಘ್ಯವೆತ್ತಿದ ತಳಿಗೆಯನ್ನೆಸೆದಾಗ ಶಿಶುಪಾಲನ ತಲೆಯು ತುಂಡಾಗಿ ಅದೇ ತಳಿಗೆಯಲ್ಲಿ ಬಂದು ಬೀಳುತ್ತದೆ, ಗಹಗಹಿಸಿ ನಗುತ್ತಿರುವ ಶೀಶುಪಾಲನ ಮುಖವನ್ನು ಕೃಷ್ಣನು ಕಾಣುತ್ತಾನೆ. ಪರಾಕ್ರಮಿಯೂ ಗರ್ವಿಷ್ಟನೂ ಆದ ಶಿಶುಪಾಲನ ದಾರ್ಷ್ಟ್ಯ ಮನೋಭಾವ ಹಾಗೂ ತಾತ್ಸಾರ ಭಾವವನ್ನು ಆ ಮುಖದಲ್ಲಿ ಗುರುತಿಸಬಹುದು. | 4 | 4 |
| 16. | ಅಳವು – ಪ್ರಮಾಣ<br>ಎಸೆ – ಶೋಭಿಸು<br>ತುಂಗ – ಎತ್ತರ<br>ಧರೆ – ಭೂಮಿ<br>ನಾಂದಿ – ಶುಭಾರಂಭ<br>ಭೂವರ – ಅರಸ<br>ಲಲಾಟ – ಹಣೆ<br>ಸಲಿಲ – ನೀರು | 4 | 4 |
| 17. | ಪ್ರಸ್ತಾರ ಹಾಕಿದ್ದಕ್ಕೆ<br>ಗಣ ವಿಭಜನೆಗೆ<br>ಛಂದಸ್ಸನ್ನು ಹೆಸರಿಸಿದುದಕ್ಕೆ | 2<br>1<br>1 | 4 |
| 18. | ಉಪಮಾಲಂಕಾರ<br>ಭರತನ ಕೋಪ – ವಿಷ (ಉಪಮಾನ) | 1<br>1 | 5 |

| | | | |
|---|---|---|---|
| | ಗರುಡಮಂತ್ರ – ಭೂಸುರನ ವಾಕ್ಯ (ಉಪಮೇಯ)<br>ಕಡಿಮೆಯಾಯಿತು ಎಂಬುದು ಸಾಮಾನ್ಯ ಧರ್ಮ<br>ಅಂತೆ ಎಂಬುದು ಉಪಮಾ ವಾಚಕ | 1<br>1<br>1 | |
| **19.** | ದೇವರು ನೀಡಿದ ವರಗಳಲ್ಲಿ ಆರೋಗ್ಯವೂ ಒಂದಾಗಿದೆ. ನಮ್ಮಲ್ಲಿ ಪ್ರತಿಯೊಬ್ಬನೂ ದೇವರಿಗೆ ಕೃತಜ್ಞತೆಯನ್ನು ಸಲ್ಲಿಸಬೇಕು. ಆರೋಗ್ಯ ಸಂರಕ್ಷಣೆಯು ಪ್ರತಿಯೊಬ್ಬನ ಕರ್ತವ್ಯವಾಗಿದೆ. ಮದ್ಯಪಾನ ಹಾಗೂ ಮಾದಕ ವಸ್ತುಗಳು ವ್ಯಕ್ತಿ, ಸಮಾಜ ಹಾಗೂ ಕುಟುಂಬಗಳ ಶತ್ರುಗಳಾಗಿವೆ. | **5** | **5** |
| **20.** | ತುಳುನಾಡನ್ನು ಅನೇಕ ರಾಜವಂಶದವರು ಆಳಿದ್ದರು. ತುಂಡರಸರಲ್ಲಿ ಅನೇಕರು ತುಳು ಮನೆಮಾತಿನವರಾಗಿದ್ದರು. ಆದರೆ ಇವರೆಲ್ಲ ಕನ್ನಡ ಅರಸರ ಕೈಕೆಳಗೆ ರಾಜ್ಯವಾಳಿದುದರಿಂದ, ಜನರ ಬಳಕೆಯ ಭಾಷೆಯು ತುಳುವೇ ಆದರೂ ನಾಡಿನ ವ್ಯವಹಾರ ಭಾಷೆ ಕನ್ನಡವಾಗಿಯೇ ಉಳಿಯುವಂತಾಯಿತು. (ಈ ಹಿನ್ನೆಲೆಯನ್ನು ತಿಳಿಸಿರಬೇಕು). ಇದರಿಂದಾಗಿ ತುಳುವಿನಲ್ಲಿ ಶಿಷ್ಟ ಸಾಹಿತ್ಯ ರಚನೆ ವಿಪುಲವಾಗಿ ಬೆಳೆಯಲು ಅವಕಾಶವಿರಲಿಲ್ಲ ಎಂಬುದಾಗಿ ಲೇಖಕರು ಕಾರಣಗಳನ್ನು ತಿಳಿಸಿದ್ದಾರೆ.<br>ಆಳಿದ ರಾಜ ಮನೆತನ<br>ತುಂಡರಸರ ಮಾಹಿತಿ<br>ಆಡುಭಾಷೆ ಹಾಗೂ ವ್ಯವಹಾರ ಭಾಷೆ – ಇತ್ಯಾದಿಗಳನ್ನು ತಿಳಿಸಿರಬೇಕು | **5** | **5** |
| **21.** | ಆಧುನಿಕ ಚಿಂತನೆಯ ಪ್ರತೀಕವಾಗಿ ಮಂಥರೆಯನ್ನಿಲ್ಲಿ ಕಾಣಬಹುದು. ಕೈಕೇಯಿಯ ಸಾಕುತಾಯಿಯಾಗಿ ಮೆರೆದು ಆಕೆಯ ಮೇಲೆ ಪ್ರೀತಿಯನ್ನು ತೋರುವಳು. ಅರ್ಹ ಮೌಲ್ಯವನ್ನು ದೊರಕಿಸಿಕೊಟ್ಟು ಕೈಕೇಯಿಗೆ ಎಲ್ಲ ವೈಭವಗಳನ್ನು ನೀಡುವಂತೆ ಅರಸನಲ್ಲಿ ಕೇಳಿಕೊಳ್ಳುವುದು, ಇತರರು ಪಾಲು ಪಡೆಯುವುದನ್ನು ಸಹಿಸಲಾರಳು, ಅನೇಕ ಕುತಂತ್ರಗಳನ್ನು ಪ್ರಯೋಗಿಸುವಳು, ತನ್ನಭಿಪ್ರಾಯಗಳಿಗೆ ಕೈಕೇಯಿ ಸ್ಪಂದಿಸದಿರುವಾಗ ಮಾತಿನ ಮೋಡಿಯಿಂದ ಕೈಕೇಯಿಯ ಮನಸ್ಸನ್ನು ಬದಲಿಸುವಳು. ಈ ರೀತಿಯಲ್ಲಿ ತನ್ನ ಧ್ಯೇಯವನ್ನು ಸಾಧಿಸುವಳು. – ಇತ್ಯಾದಿ ಅಂಶಗಳು ಅಡಕವಾಗಿರಬೇಕು | **5** | **5** |
| **22.** | ನಿರಂತರ ಬೆಳವಣಿಗೆಯು ಭಾಷೆಯ ಲಕ್ಷಣ. ಪ್ರಾದೇಶಿಕ, ರಾಜಕೀಯ, ಸಾಮಾಜಿಕ ಹಾಗೂ ಅನ್ಯಭಾಷೆಯ ಸಂಪರ್ಕ – ವಿಸ್ತಾರ ಭಾಷಾಪ್ರದೇಶದಲ್ಲಿ ಒಂದೆಡೆ ತೋರಿದ ವ್ಯತ್ಯಾಸ ಮತ್ತೊಂದೆಡೆ ಕಾಣಿಸದು. ಪರಿಣಾಮ ವಿಭಿನ್ನ ಪ್ರಾದೇಶಿಕ ಪ್ರಭೇಧಗಳು ಉಂಟಾಗುತ್ತವೆ. ಇದಕ್ಕೆ ಅನೇಕ ಮಾಹಿತಿಗಳನ್ನು ಹಾಗೂ ಉದಾಹರಣೆಗಳನ್ನು ಕೊಟ್ಟಿರಬೇಕು | **5** | **5** |
| **23.** | ಇಳೆಯಾಂಡ ಗುಡಿಮಾರನು ಲೌಕಿಕದಲ್ಲಿ ಬೇಸಾಯ ಮಾಡುವವನು. ಅದರಲ್ಲಿ ಬಂದ ಬೆಳೆಯನ್ನು ಶಿವಭಕ್ತರಿಗೆ ದಾನ ಮಾಡುತ್ತ ಸಂತೋಷ ಪಡುವನು. ಅವರಲ್ಲಿ ಕಿಂಕರ ಭಾವವನ್ನು ತೋರುವನು. ಇರುವ ಭೂಮಿಯಲ್ಲಿ ಬಿತ್ತಿ ಬೆಳೆದು ಭಕ್ತರಿಗೆ ಸಡಗರದಿಂದ ಕೊಡುವನು. ತನ್ನಲ್ಲಿರುವ ಹೊನ್ನು, ಉಂಬಳಿಯಾಗಿ ಬಂದ ಜಮೀನು ಎಲ್ಲವನ್ನೂ ದಾನ ಮಾಡುವನು. ಅವುಗಳನ್ನು ಪಡೆದವರು ಆತನನ್ನು ಹೊಗಳುವರು. ಕೆಯ್ಯಲ್ಲಿದ್ದುದೆಲ್ಲ ಮುಗಿದರೂ ಶಿವಭಕ್ತರನ್ನು ಸಂತಸಪಡಿಸುತ್ತಿದ್ದನು. ಕೊನೆಯಲ್ಲಿ ಬಾಕಿ ಉಳಿದ ಒಂದು ಕೋಲು ನೆಲದಲ್ಲಿ ಶಿವಭಕ್ತಿಯ ಬೀಜವನ್ನು ಬಿತ್ತಿ ಅದರಿಂದ ದೊರಕಿದುದನ್ನು ಶಿವಭಕ್ತರಿಗೆ ನೀಡುವನು. ಮಾನ ಮುಚ್ಚಲು ಬಟ್ಟೆಯನ್ನುಳಿದು ಎಲ್ಲವನ್ನು ದಾನ ಮಾಡುವನು. ದೇಹವನ್ನು, ಪ್ರಾಣದಲ್ಲಿ ಅರ್ಧವನ್ನು ಕೊಡಲು ಸಿದ್ಧನಾಗುವನು. . . ಇತ್ಯಾದಿ ಅಂಶಗಳು | **5** | **5** |
| **24.** | ಇಂದಿನ ಸಮಾಜದಲ್ಲಿ ದೌರ್ಜನ್ಯ ಕಿರುಕುಳಗಳಿಗೆ ಒಳಗಾಗುತ್ತಿರುವ ಸ್ತ್ರೀಯರು, ಪ್ರತಿಭಟನೆಗೆ ಅವಕಾಶವಿಲ್ಲದಿರುವುದು, ಅಸಹಾಯಕ ಸ್ಥಿತಿ, ಪುರುಷ ಮೇಧಾವಿತ್ವ, ಕಾನೂನು, ಸಲಹೆ, ಪರಿಹಾರಗಳು – ಇತ್ಯಾದಿ ಅಂಶಗಳು | **5** | **5** |
| **25.** | ಅಂಬರೀಷನ ಮಗಳಾದ ಶ್ರೀಮತಿಯನ್ನು ಮದುವೆಯಾಗಬೇಕೆಂಬ ನಾರದ – ಪರ್ವತರ ಹಂಬಲ, ಪರಸ್ಪರ ವಂಚಿಸಲು ಮುಂದಾಗುವುದು, ವಿವಾಹಕ್ಕೆ ಪಟ್ಟಣದ ಅಲಂಕಾರ, ಸ್ವಯಂವರದ ಸನ್ನಿವೇಶ, ಆಕೆಯಾಡಿದ ವಿಡಂಬನೆಯ ಮಾತುಗಳು, ಆಕೆಯ ಅಪಹರಣದ ಆರೋಪ – ಇತ್ಯಾದಿ<br><br>ಅಥವಾ<br><br>ಕುಂತಳ ದೇಶದ ಮಂತ್ರಿಯಾದ ದುಷ್ಟಬುದ್ಧಿಯ ಮನೆಯಲ್ಲಿ ಏರ್ಪಡಿಸಿದ ಭೋಜನಕೂಟ – ಉತ್ತಮ | **8** | **8** |

| | | | |
|---|---|---|---|
| | ರಾಜಲಕ್ಷಣಗಳಿಂದ ಕೂಡಿ ಆಡಿತ್ತಿದ್ದ ಚಂದ್ರಹಾಸನನ್ನು ಗುರುತಿಸಿ ಭವಿಷ್ಯದ ನುಡಿ – ತನ್ನ ಮಕ್ಕಳಿಗೆ ಅಧಿಕಾರ ನಷ್ಟವಾಗುವುದೆಂದು ತಿಳಿದು ಕಟುಕರಿಂದ ಆತನನ್ನು ಕೊಲೆಗೈಯಲು ಯತ್ನ – ಬೆರಳು ಕತ್ತರಿಸಿಕೊಂಡು ಕಾಡಿನಲ್ಲಿ ಉಪೇಕ್ಷಿತನಾದ ಮಗು ಕುಳಿಂದಕ ರಾಜನಲ್ಲಿ ಬೆಳೆಯುವುದು – ಕಪ್ಪ ತೆತ್ತು ಚಾರದಿಂದ ಚಂದ್ರಹಾಸನ ವಿಷಯ ತಿಳಿದು ಆತನನ್ನು ಇಲ್ಲದಾಗಿಸುವ ಉಪಾಯ ಹೂಡಿ ಕೊನೆಯಲ್ಲಿ ಸೋತು ಹೋಗುವ ಘಟನೆ – . . . | | |
| **26.** | ವಿದ್ಯಾರ್ಥಿಗಳು ತಮ್ಮ ಪ್ರವಾಸದ ಅನುಭವಗಳನ್ನು ತಿಳಿಸುವಾಗ ಪ್ರಸ್ತಾವನೆ, ವಿಷಯವಿಸ್ತಾರ, ಭಾಷೆ, ಶೈಲಿ ಇತ್ಯಾದಿಗಳು ಅಡಕವಾಗಿರಬೇಕು<br><br>ಅಥವಾ<br><br>ನಾಟಕ ಸಾಹಿತ್ಯ ಬೆಳೆದು ಬಂದ ಹಿನ್ನೆಲೆ – ಆರಂಭದ ನಾಟಕ – ಸಾಹಿತ್ಯದಲ್ಲಿ ನಾಟಕದ ಸ್ಥಾನ, ಪ್ರಭಾವ – ಮನೋರಂಜನೆಯ ಮಾಧ್ಯಮ – ಪ್ರಮುಖ ನಾಟಕ ಕಂಪೆನಿಗಳು – ವೃತ್ತಿ ನಾಟಕ – ನಾಟಕ ಕೃತಿಗಳು ಇತ್ಯಾದಿ . . . | **8** | **8** |

# Sample Question paper – (Kannada Optional)

## Set 1 7. WEIGHT TO QUESTION BASED ANALYSIS

| Question No. | Content | L O.No. | Specific thinking skills(No) | Form of Questions | Score | Time |
|---|---|---|---|---|---|---|
| 1 | ಸಲಿಸುವೆಂ ನೂರು ವರಂ | 1.3 | 1.1 | Objective | 1 | 1 |
| 2 | ಭಾಷೆ ಮತ್ತು ಭಾಷಾ ವಿಜ್ಞಾನ | 3.4 | 2.3 | Objective | 1 | 1 |
| 3 | ಇಳೆಯಾಂಡ ಗುಡಿಮಾರರ ರಗಳೆ | 2.5 | 1.1 | Objective | 1 | 1 |
| 4 | ಉಲ್ಲಂಘಿಸುವರುಂಟೆ ವಿಧಿಕೃತವನು | 2.3 | 1.1 | Objective | 1 | 1 |
| 5 | ಶ್ರೀಮತೀ ಸ್ವಯಂವರ | 2.4 | 2.1 | Objective | 1 | 1 |
| 6 | ಕಾಡಿಗೆ ಹೊದ್ದಿಸಿದ ಮಂಜಿನ ಪರದೆ | 3.3 | 3.2 | Objective | 1 | 1 |
| 7 | ಪ್ರಾಚೀನ ತುಳು ಸಾಹಿತ್ಯ | 3.4 | 4.3 | Objective | 1 | 1 |
| 8 | ಕನ್ನಡದಲ್ಲಿ ನಾಟಕ ಸಾಹಿತ್ಯ | 4.3 | 1.1 | Objective | 1 | 1 |
| 9 | ಇಡ್ಲಿಯ ಇತಿಹಾಸ | 3.5 | 2.1 | Objective | 1 | 1 |
| 10 | ಹರಳುಗಟ್ಟಿದ ಬಗೆ | 3.6 | 1.1 | Objective | 1 | 1 |
| 11 | ಉಲ್ಲಘಿಸುವರುಂಟೆ ವಿಧಿಕೃತವನು | 3.2 | 1.2 | Objective | 1 | 1 |
| 12 | ಶ್ರೀಮತಿ ಸ್ವಯಂವರ | 2.2 | 4.1 | Objective | 1 | 1 |
| 13 | ಪ್ರಾಚೀನ ತುಳು ಸಾಹಿತ್ಯ | 3.2,3.3,3.4 | 1.1,2.1,2.3 | S A | 2 | 4 |
| 14 | ಶ್ರೀಮತೀ ಸ್ವಯಂವರ | 1.3,1.4,1.5 | 1.1,2.2 | S A | 3 | 7 |
| 15 | ಸಲಿಸುವೆಂ ನೂರುವರಂ | 1.1,1.4,1.5 | 4.3,6.3 | S A | 4 | 8 |
| 16 | ಭಾಷೆ ಮತ್ತು ಭಾಷಾ ವಿಜ್ಞಾನ | 3.2,3.4 | 4.2 | S A | 4 | 8 |
| 17 | ಸಲಿಸುವೆಂ ನೂರುವರಂ | 1.4,1.5 | 2.3,2.5 | S A | 4 | 8 |
| 18 | ಧರೆ ಮೆಚ್ಚದಣ್ಣ ಸೋದರರ ಕಾಳೆಗಕೆ | 2.4,2.6 | 1.1,2.1 | S A | 5 | 9 |
| 19 | ಹರಳುಗಟ್ಟಿದ ಬಗೆ | 3.3,3.5 | 2.6 | S A | 5 | 9 |
| 20 | ಪ್ರಾಚೀನ ತುಳು ಸಾಹಿತ್ಯ | 3.4,3.6 | 2.4 | S A | 5 | 9 |
| 21 | ಮಂಥರಾ | 4.3,4.4 | 2.1 | S A | 5 | 9 |

| | | | | | | |
|---|---|---|---|---|---|---|
| **22** | ಭಾಷೆ ಮತ್ತು ಭಾಷಾ ವಿಜ್ಞಾನ | **3.7,3.8** | **2.7** | **S A** | **5** | **9** |
| **23** | ಇಳೆಯಾಂಡಗುಡಿಮಾರರ ರಗಳೆ | **2.4,2.5,2.6** | **3.1** | **S A** | **5** | **9** |
| **24** | ಹರಳುಗಟ್ಟಿದ ಬಗೆ | **3.3,3.4,3.5** | **5.2** | **S A** | **5** | **9** |
| **25** | ಶ್ರೀಮತೀ ಸ್ವಯಂವರ / ಉಲ್ಲಘಿಸುವರುಂಟೆ ವಿಧಿಕೃತವನು | **1.4,1.5,2.4,2.5** | **1.4,6.1** | **Essay** | **8** | **20** |
| **26** | ಕನ್ನಡದಲ್ಲಿ ನಾಟಕ ಸಾಹಿತ್ಯ / ಕಾಡಿಗೆ ಹೊದ್ದಿಸಿದ ಮಂಜಿನ ಪರದೆ | **3.4,3.6,4.5,4.6** | **3.5,2.7** | **Essay** | **8** | **20** |
| **Total** | | | | | **80** | **150** |

# PLUS TWO SAMPLE QUESTION PAPER

## SUBJECT: KANNADA (OPTIONAL)

# SET 2

# Sample Question paper – (Kannada Optional)

## 1. Weight to Unit / Content and Learning Outcome

| ಕ್ರ.ಸ | ಘಟಕ | ಕಲಿಕಾ ಸಾಧನೆಗಳು | ಅಂಕಗಳು | ಶೇಕಡಾ |
|---|---|---|---|---|
| 1 | ಹಳೆಗನ್ನಡ ನುಡಿಬೆಡಗು | 1.1,1.2,1.3,1.4,1.5,1.6 | 16 | **20** |
| 2 | ನಡುಗನ್ನಡ ಕಾವ್ಯ ಸೌರಭ | 2.1,2.2,2.32.4,2.5,2.6 | 26 | **32.50** |
| 3 | ಹೊಸಗನ್ನಡ ಗದ್ಯವಿಹಾರ | 3.1,3.2,3.3,3.4,3.6 | 29 (–8)=21 | **26.25** |
| 4 | ನಾಟಕ ರಂಗ | 4.1,4.2,4.3,4.4,4.5,4.6,4.7,4.8 | 25 (–8)=17 | **21.25** |
| | **TOTAL** | | 96–16=80 | **100** |

## Sample Question paper – (Kannada Optional)

# 2.Weight to Thinking Skills

| Sl.No. | Thinking Skills | Score | Percentage |
|---|---|---|---|
| 1 | Conceptual understanding | 48 | 60 |
| 2 | Conceptual generation | 32 | 40 |
| | | 80 | 100 |

## Sample Question paper – (Kannada Optional)

# 3. Weight to Type of Questions

| Sl.No | Type | No.of Questions | Score | Percentage |
|---|---|---|---|---|
| 1 | Objective | 15 | 15 | 18.75 |
| 2 | Short Answer | 11 | 49 | 61.25 |
| 3 | Essay | 2 (4-2) | 16 (32-16) | 20 |
| | Total | 28 | 80 | 100 |

# Sample Question paper – (Kannada Optional)

## 4.Blue Print ಕನ್ನಡ ಮಾದರಿ ಪ್ರಶ್ನೆ ಪತ್ರಿಕೆ–ನೀಲ ನಕ್ಷೆ

| ಕ್ರ.ಸ. | Thinking Skills<br>Content | Thinking Skills Conceptual Understanding | | | Thinking Skills Conceptual Generation | | | TOTAL |
|---|---|---|---|---|---|---|---|---|
| | | OBJ | S A | ESSAY | OBJ | S A | ESSAY | |
| 1 | ಸಲಿಸುವೆಂ ನೂರುವರಂ | 1 (2) | 3(1)<br>4(1) | | 1(2) | | | 11 |
| 2 | ಶ್ರೀಮತೀ ಸ್ವಯಂವರ | 1(1) | 4(1) | | | | | 5 |
| 3 | ಇಳೆಯಾವಂಡಗುದಿಮಾರರ ರಗಳೆ | 1(2) | 3(1) | | | | | 5 |
| 4 | ಧರೆ ಮೆಚ್ಚದಣ್ಣ ಸೋದರರ ಕಾಳೆಗಕೆ | | 5(1) | | 1(1) | 4(1) | | 10 |
| 5 | ಉಲ್ಲಘಿಸುವರುಂಟೆ ವಿಧಿಕೃತವನು | 1(1) | 4(1) | | 1(1) | 5(1) | | 11 |
| 6 | ಕಾಡಿಗೆ ಹೊದ್ದಿಸಿದ ಮಂಜಿನ ಪರದೆ | | | 8(1) | 1(1) | | 8(1) C | 9(17–8) |
| 7 | ಹರಳುಗಟ್ಟಿದ ಬಗೆ | | 3(1) | | 1(1) | | | 4 |
| 8 | ಇಡ್ಲಿಯ ಇತಿಹಾಸ | | | | | 2(1) | | 2 |
| 9 | ಪ್ರಾಚೀನ ತುಳು ಸಾಹಿತ್ಯ | | 2(1) | | | | | 2 |
| 10 | ಭಾಷೆ ಮತ್ತು ಭಾಷಾ ವಿಜ್ಞಾನ | 1(1) | 3(1) | | | | | 4 |
| 11 | ಕನ್ನಡದಲ್ಲಿ ನಾಟಕ ಸಾಹಿತ್ಯ | 1(1) | | | | 5(1) | | 6 |
| 12 | ಮಂಥರಾ | 1(1) | | 8(1) C | | 2(1) | 8(1) | 11(19–8) |
| | | | | 16–8 | | | 16–8 | 96–16 |
| | | 9 | 31 | 8 | 6 | 18 | 8 | 80 |
| | TOTAL | 48 | | | 32 | | | 80 |

# HSE II – SAMPLE QUESTION PAPER

# SUBJECT - KANNADA (OPTIONAL)

Time : 2.30 Hrs

Cool of time : 15 Mnts

Max. Markls : 80

---

**ಸೂಚನೆಗಳು**

- **15 ನಿಮಿಷಗಳ 'ಕೂಲ್ ಆಫ್ ಟೈಮ್' ನೀಡಲಾಗಿದೆ. ಉತ್ತರ ಬರೆಯಲು ಎರಡುವರೆ ಗಂಟೆಗಳ ಕಾಲಾವಕಾಶವಿದೆ.**
- **'ಕೂಲ್ ಆಫ್ ಸಮಯ'ದಲ್ಲಿ ವಿದ್ಯಾರ್ಥಿಗಳು ಉತ್ತರಗಳನ್ನು ಬರೆಯುವುದಾಗಲಿ ಇತರರೊಂದಿಗೆ ಚರ್ಚಿಸುವುದಾಗಲಿ ಮಾಡಬಾರದು.**
- **ಉತ್ತರಗಳನ್ನು ಬರೆಯುವುದಕ್ಕೆ ಮೊದಲು ಪ್ರಶ್ನೆಗಳನ್ನು ಸೂಕ್ಷ್ಮವಾಗಿ ಓದಿರಿ.**
- **ಎಲ್ಲಾ ಪ್ರಶ್ನೆಗಳು ಕಡ್ಡಾಯವಾಗಿವೆ. ಅವುಗಳಲ್ಲಿ ಆಯ್ಕೆಗಳಿದ್ದರೆ ಯಾವುದಾದರೂ ಒಂದನ್ನು ಉತ್ತರಿಸತಕ್ಕದ್ದು.**
- **ನೀವು ಒಂದು ಪ್ರಶ್ನೆಯನ್ನು ಆಯ್ಕೆ ಮಾಡಿದಾಗ ಅದರದ್ದೇ ಆದ ಬಿಡಿ ಪ್ರಶ್ನೆಗಳನ್ನು ಉತ್ತರಿಸಬೇಕು.**

**(1ರಿಂದ 4ನೇ ಪ್ರಶ್ನೆಗಳ ವರೆಗೆ ಸರಿಯಾದ ಉತ್ತರವನ್ನು ಆವರಣದಿಂದ ಆರಿಸಿ ಬರೆಯಿರಿ.)**

1. ಪಂಪ ಕವಿಯ ಕಾಲ (1)

   (8ನೇ ಶತಮಾನ, 9ನೇ ಶತಮಾನ, 10ನೇ ಶತಮಾನ, 12ನೇ ಶತಮಾನ )

2. 'ಹೊಸಗನ್ನಡದ ಮುಂಗೋಳಿ' ಎಂಬ ಕೀರ್ತಿಗೆ ಪಾತ್ರನಾದ ಕವಿ (1)

   (ಮುದ್ದಣ, ಹರಿಹರ, ರತ್ನಾಕರವರ್ಣಿ, ಸೇಡಿಯಾಪು ಕೃಷ್ಣಭಟ್ಟ)

3. ಕನ್ನಡದ ಮೊದಲ ನಾಟಕ (1)

(ಅಶ್ವತ್ಥಾಮನ್, ಮಿತ್ರವಿಂದಾ ಗೋವಿಂದ, ಇಗ್ಗಪ್ಪಹೆಗ್ಗಡೆಯ ವಿವಾಹ ಪ್ರಹಸನ, ಹೆಬ್ಬೆರಳು)

4. "ಅಧಿಕಾರ ಅಂತಸ್ತು ತರತ್ತೆ

ಅಂತಸ್ತು ಅಂತರ ತರತ್ತೆ" – ಇದು ಮಂಥರಾ ನಾಟಕದಲ್ಲಿ ಬರುವ ಮಾತು. ಈ ಮಾತನ್ನು ಆಡಿದವರು (1)

(ಕೈಕಯಿ, ಭರತ, ದಶರಥ, ಮಂಥರಾ)

5. 'ಅ' ವಿಭಾಗದೊಂದಿಗೆ 'ಆ' ಮತ್ತು 'ಇ' ವಿಭಾಗಗಳನ್ನು ಹೊಂದಿಸಿ ಬರೆಯಿರಿ (4*1=4)

| | **ಅ ವಿಭಾಗ** | **ಆ ವಿಭಾಗ** | **ಇ ವಿಭಾಗ** |
|---|---|---|---|
| 1 | ಪಂಪ | ಜೈಮಿನಿ ಭಾರತ | ಪ್ರವಾಸ ಕಥನ |
| 2 | ಲಕ್ಷ್ಮೀಶ | ಆದಿಪುರಾಣ | ಆತ್ಮಕಥೆ |
| 3 | ಜಿ.ಪಿ. ಬಸವರಾಜು | ಬರಹಗಾರ್ತಿಯ ಬದುಕು | ಷಟ್ಪದಿ ಕಾವ್ಯ |
| 4 | ಅನುಪಮಾ ನಿರಂಜನ | ಕಾಡು ಕಣಿವೆಯ ಹಾಡು | ಚಂಪೂ ಕಾವ್ಯ |

**ಸೂಚನೆಯಂತೆ ಉತ್ತರಿಸಿರಿ**

6. ಪಾದಾಂಬುಜ – ಈ ಪದವನ್ನು ವಿಂಗಡಿಸಿ ಬರೆದು ಸಂಧಿಯನ್ನು ಹೆಸರಿಸಿರಿ. (1)

7. ರತ್ನತ್ರಯರು ಎಂಬ ಹೆಸರಿಗೆ ಪಾತ್ರರಾದ ಕವಿಗಳು ಯಾರು? (1)

8. ಚಿನ್ನ – ಇದರ ಎರಡು ಪರ್ಯಾಯ ನಾಮಗಳನ್ನು ಬರೆಯಿರಿ. (1)

9. ಕುಲಶೀಲವಿತ್ತವಿದ್ಯೆಗಳು – ಈ ಪದವನ್ನು ವಿಗ್ರಹಿಸಿ ಬರೆದು ಸಮಾಸವನ್ನು ಹೆಸರಿಸಿರಿ. (1)

10. ಕುಡವೇಟ್ವಿನ ಕುಡುವನ ಕುಡೆ ಪಡೆವನ ಪೆಂಪೇ ನೆಗಟ್ತೆವಡೆಗುಮೊ – ಈ ಪದ್ಯವನ್ನು ಹೊಸಗನ್ನಡದಲ್ಲಿ ಬರೆಯಿರಿ. (1)

11. ಕನ್ನಡ ಭಾಷೆಯು ಯಾವ ಭಾಷಾವರ್ಗಕ್ಕೆ ಸೇರುತ್ತದೆ? (1)

12. 'ರಘಟಾ' – ಈ ಪದದ ತದ್ಭವ ರೂಪ ಯಾವುದು? (1)

**(ಸಂಕ್ಷಿಪ್ತವಾಗಿ ಉತ್ತರಿಸಿರಿ.)**

13. ತುಳುವರ ಗರಡಿಯ ವೈಶಿಷ್ಟ್ಯಗಳನ್ನು ಬರೆಯಿರಿ. (2)

14. ನಿಮ್ಮ ಪರಿಸರದ ಸ್ಥಳವೊಂದರ ಹೆಸರಿನ ಕುರಿತಾದ ವಿಶೇಷತೆಯನ್ನು ಬರೆಯಿರಿ. (2)

15. 'ಬಾವೀ ನೀರ ಕಲಕಲಿಕ್ಕೆ ಸಣ್ಣದೊಂದು ಕಲ್ಲು ಸಾಕಾದೀತು' – ಈ ಮಾತಿನ ಸ್ವಾರಸ್ಯವನ್ನು ಬರೆಯಿರಿ (2)

16. ಶ್ರೀಕೃಷ್ಣನು ಅಗ್ರಪೂಜೆಗೆ ಅರ್ಹನೆಂದು ಹೇಳಲು ಭೀಷ್ಮನು ನೀಡಿದ ಕಾರಣಗಳು ಯಾವುವು? (3)

17. ಇಳೆಯಾಂಡಗುಡಿಮಾರನು ಮಾಡಿದ ಭಕ್ತಿಯ ಕೃಷಿಯನ್ನು ವಿವರಿಸಿರಿ. (3)

18. ಅನುಪಮಾ ನಿರಂಜನರ ಅಭಿಪ್ರಾಯದಂತೆ ಒಳ್ಳೆಯ ಸಾಹಿತ್ಯ ರಚನೆ ಹೇಗೆ ಸಾಧ್ಯವಾಗುತ್ತದೆ? ತಿಳಿಸಿರಿ. (3)

19. ಕನ್ನಡದ ಉಪಭಾಷೆಗಳ ಕುರಿತು ಕಿರುಟಿಪ್ಪಣಿ ಬರೆಯಿರಿ. (3)

20. ಕೆಳಗೆ ನೀಡಲಾದ ಪದ್ಯಭಾಗದಲ್ಲಿ ಕಾಣಿಸುವ ಅಲಂಕಾರವನ್ನು ತಿಳಿಸಿ ಲಕ್ಷಣವನ್ನು ಬರೆಯಿರಿ (4)

ಕುಂದಣದದ್ರಿ ಪಚ್ಚೆಯ ಗಿರಿಯೆರಡೊಡ್ಡಿ
ನಿಂದುವೋ ಕಳದೊಳೆಂಬಂತೆ
ಸೌಂದರಾಯುತ ದೀರ್ಘದೇಹಿಗಳಣ್ಣ ತ
ಮ್ಮಂದಿರೊಪ್ಪಿದರು ನೋಳ್ಪರಿಗೆ

21. ನಾರದ ಮತ್ತು ಪರ್ವತರೆಂಬ ಮುನಿಗಳು ಪರಸ್ಪರ ವಂಚಿಸಲು ಹೋಗಿ ತಾವೇ ಮೋಸಹೋದ ಸನ್ನಿವೇಶವನ್ನು ನಿರೂಪಿಸಿರಿ. (4)

22. ಆಸ್ವಾದನ ಟಿಪ್ಪಣಿ ಬರೆಯಿರಿ. (4)

ಬಳಿಕೋರ್ವರೋರ್ವರಂ ನೋಡುತ್ತ ಕೂಡುತ್ತ
ನಲವಿಂದ ನೃತ್ಯಮಂ ಮಾಡುತ್ತ ಪಾಡುತ್ತ
ಸೆಳಸಿ ಸರಸೋಕ್ತಿಗಳನಾಡುತ್ತ ತೀಡುತ್ತ ಬೆಳ್ನಗೆಯ ಬೆಡಂಗುಗಳನು
ಅಲರ್ಗಳಂ ತೆಗೆತೆಗೆದು ನೀಡುತ್ತ ಸೂಡುತ್ತ
ಲಲಿತ ಮಧು ಚಷಕಮಂ ಬೇಡುತ್ತ ಕಾಡುತ್ತ
ಕಲೆಗಳ ವಿಲಾಸಮಂ ಪೂಡುತ್ತ ಕೂಡುತ್ತ ಕಣ್ಗೆಸೆದರೆಳೆವೆಣ್ಗಳು

23. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ ಗಣ ವಿಭಜನೆ ಮಾಡಿ ಛಂದಸ್ಸನ್ನು ಹೆಸರಿಸಿರಿ. (4)

ಮನದೊಲವರಮುಳ್ಳೊಡೆ ಕುಡು

ಮನೆಯೊಳ್ ಹರಿಗಗ್ರಪೂಜೆಯಂ ಯಜ್ಞದೊಳೀ

24. ದುಷ್ಟಬುದ್ಧಿಯ ಕುತಂತ್ರಕ್ಕೆ ಸಿಲುಕಿದರೂ ಅದರಿಂದ ಪಾರಾದ ಚಂದ್ರಹಾಸನ ಕಥೆಯು 'ಉಲ್ಲಂಘಿಸುವರುಂಟೆ ವಿಧಿಕೃತವನು' ಕಾವ್ಯಭಾಗದಲ್ಲಿ ಹೇಗೆ ಮೂಡಿಬಂದಿದೆ? ವಿವರಿಸಿರಿ. (5)

25. 'ಧರೆಮೆಚ್ಚದಣ್ಣ ಸೋದರರ ಕಾಳಗಕೆ' ಕಾವ್ಯಭಾಗದಲ್ಲಿ ವರ್ಣಿತವಾದ ಭರತನ ವ್ಯಕ್ತಿತ್ವವನ್ನು ಕುರಿತು ವಿಮರ್ಶಾತ್ಮಕ ಲೇಖನವನ್ನು ಬರೆಯಿರಿ. (5)

26. ಕನ್ನಡ ನಾಟಕ ಸಾಹಿತ್ಯದ ಬೆಳವಣಿಗೆಯ ಸ್ಥೂಲ ಪರಿಚಯವನ್ನು ನೀಡಿರಿ. (5)

27. ಕಾಡಿಗೆ ಹೊದ್ದಿಸಿದ ಮಂಜಿನ ಪರದೆ – ಪ್ರವಾಸ ಕಥನವನ್ನು ಪರಿಚಯಿಸಿರಿ. (8)

ಅಥವಾ

ನೀವು ಕೈಗೊಂಡ ಪ್ರವಾಸವೊಂದರ ಅನುಭವಗಳನ್ನು ಬರೆಯಿರಿ.

28. ಮಂಥರಾ – ನಾಟಕದಲ್ಲಿ ಮೂಡಿಬಂದಿರುವ ಮಂಥರೆಯ ಪಾತ್ರಚಿತ್ರಣ ಮಾಡಿರಿ. (8)

ಅಥವಾ

ಮಂಥರೆಯ ಉಪದೇಶಕ್ಕೆ ಮಾರುಹೋದ ಕೈಕಯಿಂದಾಗಿ ಅಯೋಧ್ಯೆಯಲ್ಲಿ ಉಂಟಾದ ಅನಾಹುತಗಳ ಕುರಿತು ವಿವರಿಸಿರಿ.

# ANSWER KEY / VALUE POINTS

| Q. No. | Answer Key / Value Points | Score | Total |
|---|---|---|---|
| 1. | 10ನೇ ಶತಮಾನ | 1 | 1 |
| 2. | ಮುದ್ದಣ | 1 | 1 |
| 3. | ಮಿತ್ರವಿಂದಾ ಗೋವಿಂದ | 1 | 1 |
| 4. | ಕೈಕಯಿ | 1 | 1 |
| 5. | 1 ಲಕ್ಷ್ಮೀಶ – ಜೈಮಿನಿ ಭಾರತ – ಷಟ್ಪದಿ ಕಾವ್ಯ<br>2 ಪಂಪ – ಆದಿಪುರಾಣ – ಚಂಪೂ ಕಾವ್ಯ<br>3 ಜಿ ಪಿ ಬಸವರಾಜು – ಕಾಡು ಕಣಿವೆಯ ಹಾಡು – ಪ್ರವಾಸ ಕಥನ<br>4 ಅನುಪಮಾ ನಿರಂಜನ – ಬರಹಗಾರ್ತಿಯ ಬದುಕು – ಆತ್ಮಕಥೆ | 1<br>1<br>1<br>1 | 4 |
| 6. | ಪದ + ಅಂಬುಜ = ಪದಾಂಬುಜ (ಸವರ್ಣದೀರ್ಘ ಸಂಧಿ) | 1 | 1 |
| 7. | ಪಂಪ, ಪೊನ್ನ, ರನ್ನ | 1 | 1 |
| 8. | ಹೇಮ, ಸುವರ್ಣ, ಕನಕ, ಕಾಂಚನ – ಹೀಗೆ ಯಾವುದಾದರೂ ಎರಡನ್ನು ಬರೆದರೆ | ½<br>½ | 1 |
| 9. | ಕುಲವೂ, ಶೀಲವೂ, ವಿತ್ತವೂ, ವಿದ್ಯೆಯೂ – ದ್ವಂದ್ವ ಸಮಾಸ | 1 | 1 |
| 10. | ಕೊಡಲು ಹೇಳುವವನ, ಕೊಡುವವನ, ಕೊಡಲು ಪಡೆವವನ ಹಿರಿಮೆಯು ಕೀರ್ತಿಯನ್ನು ಪಡೆಯುತ್ತದೆಯೇ? | 1 | 1 |
| 11. | ದ್ರಾವಿಡ | 1 | 1 |
| 12. | ರಗಳೆ | 1 | 1 |
| 13. | ತುಳುವರ ಗರಡಿ ವಿದ್ಯೆ ವಿಶಿಷ್ಟವಾದುದು – ಹದಿನೆಂಟು ವಿಧದ ಅಭ್ಯಾಸಗಳಿವೆ – ಹಿಂದಿನ ಕಾಲದಲ್ಲಿ ಗರಡಿ ವಿದ್ಯೆಯ ಹೆಚ್ಚಿನ ಅಧ್ಯಯನಕ್ಕಾಗಿ ಕೇರಳೀಯರು ತುಳುನಾಡಿಗೆ ಬರುತ್ತಿದ್ದರು – ಕೇರಳದ ಜನಪದ ಹಾಡುಗಳಲ್ಲಿ ಗರಡಿ ವಿದ್ಯೆಯ ಪ್ರಸ್ತಾಪವಿದೆ ಈ ಯುದ್ಧ ಕಲೆಯನ್ನು ಬಲ್ಲ ತುಳುವರು ವೀರರಾಗಿದ್ದರು ಗರಡಿ ಎಂದರೆ ವ್ಯಾಯಾಮ ಶಾಲೆ ಕೇರಳದ ಕಳರಿಗಳಲ್ಲಿ ಯುದ್ಧ ವಿದ್ಯೆಯನ್ನು ಕಲಿಸಲು ತುಳುನಾಡಿನಿಂದ ಗರಡಿ ಸಾಧಕರನ್ನು ಕರೆಸಿಕೊಳ್ಳುವ ಸಂಪ್ರದಾಯವಿತ್ತು – ಇತ್ಯಾದಿ ಅಂಶಗಳು | 2 | 2 |
| 14. | ಸ್ಥಳದ ಹೆಸರಿನ ಕುರಿತಾದ ವಿವರಣೆಯನ್ನು ಬರೆದಿದ್ದರೆ | 2 | 2 |
| 15. | ಯಾವುದೇ ಕಾರ್ಯವನ್ನು ಮಾಡುವ ಮೊದಲು ಬಹಳಷ್ಟು ಯೋಚಿಸಬೇಕು ನಾವು ಮಾಡುವ ಸಣ್ಣ ತಪ್ಪಿನಿಂದಾಗಿ ದೊಡ್ಡ ಅನಾಹುತ ಉಂಟಾಗಬಹುದು ಇತರರಿಗೂ ತೊಂದರೆ ಆಗಬಹುದು ಹಾಗೆ ಮಾಡಬಾರದು ಎಂಬ ಸೂಚನೆ ಇಲ್ಲಿದೆ ಬಾವಿಯಲ್ಲಿ ಪ್ರಶಾಂತವಾಗಿದ್ದ ನೀರನ್ನು ಕಲಕಲು ಒಂದು ಚಿಕ್ಕ ಕಲ್ಲು ಬಿದ್ದರೂ ಸಾಕಾಗುತ್ತದೆ | 2 | 2 |
| 16. | ಬಲಿಚಕ್ರವರ್ತಿಯನ್ನು ಕಟ್ಟಿ ಹಾಕಿದವನು – ಪರಾಕ್ರಮ ತೋರಿ ಪಾತಾಳದಿಂದ ಭೂಮಿಯನ್ನು ಎತ್ತಿ ತಂದವನು – ನರಸಿಂಹನ ರೂಪದಿಂದ ಹಿರಣ್ಯಕಶಿಪುವನ್ನು ಸೀಳಿದವನು – ಸಮುದ್ರಮಥನದ ಕಾರ್ಯಕ್ಕೆ ಮಂದರ ಪರ್ವತವನ್ನು ತಂದವನು – ಈ ಎಲ್ಲ ಅಂಶಗಳು ಒಳಗೊಂಡಿದ್ದರೆ | 3 | 3 |
| 17. | ಚಿತ್ತವೆಂಬ ಭೂಮಿಯನ್ನು ಹಸನು ಮಾಡಿ ಶಿವಧ್ಯಾನವನ್ನು ನೇಗಿಲಾಗಿಸಿ, ಅರಿಷಡ್ವರ್ಗಗಳನ್ನು ಹಗ್ಗವಾಗಿಸಿ, ಅಹಂಕಾರವನ್ನು ನೇಗಿಲಿನ ಕೀಲಾಗಿಸಿ, ಶಿವನ ಬಗೆಗಿನ ನಿಷ್ಠೆಯನ್ನು ಬೀಜವನ್ನಾಗಿಸಿ, ಸುಜ್ಞಾನವೆಂಬ ಮಳೆ ಸುರಿಸಿ, ಶಿವನ ಮೇಲಿನ ಸದ್ಭಕ್ತಿ ಎಂಬ ಬೀಜವನ್ನು ಬಿತ್ತಿ, ಹಸಿವು – ಬಾಯಾರಿಕೆಯೆಂಬ ಕಳೆಗಳನ್ನು ಕಿತ್ತು, ಭಕ್ತಿ ಎಂಬ ಬೇಸಾಯವನ್ನು ಮಾಡುತ್ತಿದ್ದನು | 3 | 3 |
| 18. | ಬರಹಗಾರರಿಗೆ ಏಕಾಂತ ಇರಬೇಕು ತನ್ನದೇ ಆದ ಕೊಠಡಿ ಇರಬೇಕು ಸ್ವತಂತ್ರವಾದ ಆದಾಯ ಇರಬೇಕು ಇವು ಮಹಿಳೆಗೆ ಆತ್ಮವಿಶ್ವಾಸವನ್ನೂ ಧೈರ್ಯವನ್ನೂ ಕೊಡಬಲ್ಲವು ತೀವ್ರವಾದ ಸ್ಪಂದನೆ, | 3 | 3 |

| | | | |
|---|---|---|---|
| | ಯೋಚನೆ, ಅಧ್ಯಯನ – ಇವು ಬರವಣಿಗೆಯಲ್ಲಿ ಪ್ರತಿಫಲಿಸುತ್ತದೆ | | |
| 19. | ಗುಲ್ಬರ್ಗ ಕನ್ನಡ, ಧಾರವಾಡ ಕನ್ನಡ, ಮಂಗಳೂರು ಕನ್ನಡ, ಮೈಸೂರು ಕನ್ನಡ – ಇತ್ಯಾದಿ ಉಪಭಾಷೆಗಳು – ಇತರ ಭಾಷೆಗಳ ಪ್ರಭಾವ – ಉದಾಹರಣೆ ಸಹಿತ ಬರೆದಿರಬೇಕು | 3 | 3 |
| 20. | ಉಪಮಾಲಂಕಾರ<br>ಉಪಮೇಯ – ಅಣ್ಣ ತಮ್ಮಂದಿರು<br>ಉಪಮಾನ – ಕುಂದಣದದ್ರಿ ಪಚ್ಚೆಯ ಗಿರಿಯೆರಡು<br>ಉಪಮಾವಾಚಕ – ಅಂತೆ<br>ಸಾಧಾರಣ ಧರ್ಮ – ದೀರ್ಘದೇಹಿ. | 1<br>¾<br>¾<br>¾<br>¾ | 4 |
| 21. | ಶ್ರೀಮತಿಯನ್ನು ತಾವೇ ವರಿಸಬೇಕೆಂಬ ವರವನ್ನು ವಿಷ್ಣುವಿನಿಂದ ಪಡೆಯುವುದು – ಸ್ವಯಂವರಕ್ಕೆ ಸಂಭ್ರಮದ ಆಗಮನ – ಆಕೆಗೆ ಅವರು ಮಂಗಗಳಾಗಿ ಕಾಣಿಸುವುದು – ಅವರಿಗೆ ಸಂಶಯ ಉಂಟಾಗುವುದು – ಅಂಬರೀಷನನ್ನೇ ದೂರುವುದು – ಶ್ರೀಮತಿಯು ಅದೃಶ್ಯವಾಗುವುದು – ಮರಳಿ ವಿಷ್ಣುವಿನೆಡೆಗೆ ಬಂದಾಗ ಆತನಿಂದಲೂ ಉತ್ತರ ದೊರಕದಿರುವುದು – ಕೊನೆಗೆ ಪೆಚ್ಚು ಮೋರೆ ಹಾಕಿ ಹಿಂದಿರುಗುವುದು ಇತ್ಯಾದಿ | 4 | 4 |
| 22. | ರಾಜನ ಮಗಳಾದ ಚಂಪಕಮಾಲಿನಿ ಹಾಗೂ ಮಂತ್ರಿಯ ಮಗಳಾದ ವಿಷಯೆ ವಸಂತಕಾಲದ ಸಂದರ್ಭದಲ್ಲಿ ಜಲಕ್ರೀಡೆಯಾಡುವರು ಆಗ ಒಬ್ಬರನ್ನೊಬ್ಬರು ನೋಡುತ್ತ, ಜತೆಗೂಡುತ್ತ ಸಂತಸದಿಂದ ನೃತ್ಯ ಮಾಡುತ್ತ ಸರಸದ ಮಾತುಗಳನ್ನಾಡುತ್ತ, ನಗುತ್ತ, ಮಧುವಿನ ಪಾತ್ರೆಯನ್ನು ಕೇಳುತ್ತ, ಎಳೆಯುತ್ತ, ಹೂಗಳನ್ನು ಕಿತ್ತು ನೀಡುತ್ತ, ಮುಡಿಯುತ್ತ – ಈ ರೀತಿಯ ನಾನಾ ಕಲೆಗಳನ್ನು ಪ್ರದರ್ಶಿಸುತ್ತಿದ್ದರು – ಇತ್ಯಾದಿ | 4 | 4 |
| 23. | ಕಂದ ಪದ್ಯ<br>ಪ್ರಸ್ತಾರ ಹಾಕಿದ್ದಕ್ಕೆ<br>ಗಣವಿಭಜನೆ ಮಾಡಿದ್ದಕ್ಕೆ | 1<br>2<br>1 | 4 |
| 24. | ದುಷ್ಟಬುದ್ಧಿಚಂದ್ರಹಾಸನನ್ನು ಕಾಣುವುದು – ಅವನನ್ನು ಕೊಲ್ಲಲು ಉಪಾಯ ಹೂಡುವುದು – ಅವನ ಕೈಯಲ್ಲೇ ಪತ್ರವನ್ನು ನೀಡಿ ತನ್ನ ಮಗನಿಗೆ ಕಳುಹಿಸಿಕೊಡುವುದು – ದಾರಿ ಮಧ್ಯೆ ಚಂದ್ರಹಾಸ ವಿಶ್ರಾಂತಿ ಪಡೆಯುವ ಸಮಯದಲ್ಲಿ ಅಲ್ಲಿಗೆ ಬಂದ ವಿಷಯೆ ಅವನಲ್ಲಿ ಆಕರ್ಶಿತಳಾಗುವುದು – ಪತ್ರವನ್ನು ಕಂಡು ಓದಿ ಅದರಲ್ಲಿನ ಅಕ್ಷರ ತಪ್ಪನ್ನು ತಿದ್ದುವುದು – ಇತ್ಯಾದಿ ಅಂಶಗಳಿರಬೇಕು | 5 | 5 |
| 25. | ತನ್ನೊಂದಿಗೆ ಯುದ್ಧಕ್ಕೆ ಸಿದ್ಧನಾದ ಬಾಹುಬಲಿಯನ್ನುದ್ದೇಶಿಸಿ ಭರತನು ಹೇಳುವ ಮಾತುಗಳು – ಕಾರಣವಿಲ್ಲದೆ ಯುದ್ಧಮಾಡುವರೆ? – ನಮ್ಮೊಳಗೆ ಹಗೆಯಿಲ್ಲ – ಸಹೋದರರೊಳಗಿನ ಯುದ್ಧವನ್ನು ಭೂಮಿಯು ಇಷ್ಟಪಡದು – ನಾನು ಹಿರಿಯನಾದುದರಿಂದ ನಿನ್ನನ್ನು ಬರಲು ಹೇಳಿದೆ, ನೀನು ಅಣ್ಣನಾಗಿದ್ದರೆ ನಾನೇ ನಿನ್ನ ಬಳಿಗೆ ಬರುತ್ತಿದ್ದೆ – ನಾವು ಹೋರಾಡಿ ಗೆದ್ದರೆ ಕೀರ್ತಿ ಬರಲಾರದು – ಮೂರು ಲೋಕದವರೂ ನಮ್ಮ ಬಗ್ಗೆ ಅಸಹ್ಯ ಪಡಬಹುದು – ಈ ಎಲ್ಲ ಅಂಶಗಳು ಇರಬೇಕು | 5 | 5 |
| 26. | ಕನ್ನಡ ನಾಟಕ ಸಾಹಿತ್ಯವು ಬೆಳೆದು ಬಂದ ಬಗೆಯ ಸ್ಥೂಲ ಪರಿಚಯವನ್ನು ಬರೆದಿರಬೇಕು | 5 | 5 |

| | | | |
|---|---|---|---|
| | | | |
| 27. | 'ಕಾಡಿಗೆ ಹೊದ್ದಿಸಿದ ಮಂಜಿನ ಪರದೆಯ' ಒಟ್ಟು ಪರಿಚಯವನ್ನು ಒಳಗೊಂಡಿರುವ ಬರಹ<br><br>ಅಥವಾ<br><br>ವಿದ್ಯಾರ್ಥಿಯು ಕೈಗೊಂಡ ಪ್ರವಾಸದ ಅನುಭವಗಳನ್ನೊಳಗೊಂಡ ಉತ್ತಮವಾದ ಬರಹ | 8 | 8 |
| 28. | ಮಂಥರೆಯ ಸ್ಥಾನ – ಕೈಕಯಿಯ ಮೇಲಿನ ಅತಿಯಾದ ಮಮತೆ – ಉಳಿದವರ ಕಡೆಗೆ ಗಮನವಿರಿಸದ ಸ್ಥಿತಿ, ಭರತನೇ ರಾಜನಾಗಬೇಕೆಂಬ ಅತಿಶಯವಾದ ಆಸೆ – ಅದಕ್ಕಾಗಿ ಕೈಕಯಿಯ ಮನಸ್ಸನ್ನು ಬದಲಾಯಿಸುವುದು – ಕೊನೆಗೂ ತನ್ನ ತೀರ್ಮಾನವನ್ನು ನಡೆಯವುದು – ಇತ್ಯಾದಿಯಾಗಿ ನಾಟಕದಲ್ಲಿನ ಮಂಥರೆಯ ಚಿತ್ರಣ<br><br>ಅಥವಾ<br><br>ಭರತ ರಾಜನಾಗಬೇಕೆಂಬ ಬಯಕೆ ಹೊಂದಿದ್ದ ಮಂಥರೆ ಕೈಕಯಿಯ ಮನಸ್ಸನ್ನು ಬದಲಾಯಿಸುವುದು – ಅವಳ ಮಾತನ್ನು ನಂಬಿದ ಕೈಕಯಿ ದಶರಥನಲ್ಲಿ ತನಗೆ ನೀಡಿದ ವಚನವನ್ನು ಪಾಲಿಸುವಂತೆ ಕೇಳಿಕೊಳ್ಳವುದು – ಮುಂದೆ ಅಯೋಧ್ಯೆಯಲ್ಲಿ ಸಂಭವಿಸಿದ ಘಟನೆಗಳನ್ನೊಳಗೊಂಡ ಬರಹ | 8 | 8 |

# Sample Question paper – (Kannada Optional)

## Set 1 7. WEIGHT TO QUESTION BASED ANALYSIS

| Question No. | Content | L O.No. | Specific thinking skills(No) | Form of Questions | Score | Time |
|---|---|---|---|---|---|---|
| 1 | ಸಲಿಸುವೆಂ ನೂರುವರಂ | 1.3 | 1.1 | Objective | 1 | 1 |
| 2 | ಶ್ರೀಮತೀ ಸ್ವಯಂವರ | 1.2 | 1.2 | Objective | 1 | 1 |
| 3 | ಕನ್ನಡದಲ್ಲಿ ನಾಟಕ ಸಾಹಿತ್ಯ | 4.2 | 1.1 | Objective | 1 | 1 |
| 4 | ಮಂಥರಾ | 4.4 | 1.1 | Objective | 1 | 1 |
| 5 | ಸಲಿಸುವೆಂ ನೂರುವರಂ | 1.1 | 4.2 | Objective | 1 | 1 |
| | ಉಲ್ಲಂಘಿಸುವರುಂಟೆ ವಿಧಿಕೃತವನು | 2.4 | 4.2 | Objective | 1 | 1 |
| | ಕಾಡಿಗೆ ಹೊದ್ದಿಸಿದ ಮಂಜಿನ ಪರದೆ | 3.4 | 4.2 | Objective | 1 | 1 |
| | ಹರಳುಗಟ್ಟಿದ ಬಗೆ | 3.5 | 4.2 | Objective | 1 | 1 |
| 6 | ಧರೆ ಮೆಚ್ಚದಣ್ಣ ಸೋದರರ  ಕಾಳೆಗಕೆ | 2.3 | 3.2 | Objective | 1 | 1 |
| 7 | ಸಲಿಸುವೆಂ ನೂರುವರಂ | 1.4 | 1.1 | Objective | 1 | 1 |
| 8 | ಇಳೆಯಾಂಡಗುಡಿಮಾರರ ರಗಳೆ | 2.2 | 4.1 | Objective | 1 | 1 |
| 9 | ಇಳೆಯಾಂಡಗುಡಿಮಾರರ ರಗಳೆ | 2.2 | 3.2 | Objective | 1 | 1 |
| 10 | ಸಲಿಸುವೆಂ ನೂರುವರಂ | 1.4 | 3.1 | S A | 1 | 1 |
| 11 | ಭಾಷೆ ಮತ್ತು ಭಾಷಾ ವಿಜ್ಞಾನ | 4.5 | 4.1 | S A | 1 | 1 |
| 12 | ಇಳೆಯಾಂಡಗುಡಿಮಾರರ ರಗಳೆ | 2.5 | 4.3 | S A | 1 | 1 |
| 13 | ಪ್ರಾಚೀನ ತುಳು ಸಾಹಿತ್ಯ | 3.2 | 2.7 | S A | 2 | 3 |
| 14 | ಇಡ್ಲಿಯ ಇತಿಹಾಸ | 3.3 | 2..4 | S A | 2 | 3 |
| 15 | ಮಂಥರಾ | 4.4 | 2.7 | S A | 2 | 3 |
| 16 | ಸಲಿಸುವೆಂ ನೂರುವರಂ | 1.5 | 2.1 | S A | 3 | 6 |
| 17 | ಇಳೆಯಾಂಡಗುಡಿಮಾರರ ರಗಳೆ | 2.3,2.4 | 2.4 | S A | 3 | 6 |
| 18 | ಹರಳುಗಟ್ಟಿದ ಬಗೆ | 3.2,3.3 | 2.3 | S A | 3 | 6 |

| | | | | | | |
|---|---|---|---|---|---|---|
| **19** | **ಭಾಷೆ ಮತ್ತು ಭಾಷಾ ವಿಜ್ಞಾನ** | **3.7,3.8** | **2.4** | **S A** | **3** | **6** |
| **20** | **ಧರೆ ಮೆಚ್ಚದಣ್ಣ ಸೋದರರ ಕಾಳೆಗಕೆ** | **2.4,2.5,2.6** | **3.1** | **S A** | **4** | **8** |
| **21** | **ಶ್ರೀಮತೀ ಸ್ವಯಂವರ** | **1.5** | **4.3** | **S A** | **4** | **8** |
| **22** | **ಉಲ್ಲಂಘಿಸುವರುಂಟೆ ವಿಧಿಕೃತವನು** | **2.4,2.5** | **2.4** | **S A** | **4** | **8** |
| **23** | **ಸಲಿಸುವೆಂ ನೂರುವರಂ** | **1.3,1.4,1.6** | **3.2** | **S A** | **4** | **8** |
| **24** | **ಉಲ್ಲಂಘಿಸುವರುಂಟೆ ವಿಧಿಕೃತವನು** | **2.4,2.5** | **6.1** | **S A** | **5** | **10** |
| **25** | **ಧರೆ ಮೆಚ್ಚದಣ್ಣ ಸೋದರರ ಕಾಳೆಗಕೆ** | **2.5,2.6** | **5.2** | **S A** | **5** | **10** |
| **26** | **ಕನ್ನಡದಲ್ಲಿ ನಾಟಕ ಸಾಹಿತ್ಯ** | **4.3,4.4** | **3.1** | **S A** | **5** | **10** |
| **27** | **ಕನ್ನಡದಲ್ಲಿ ನಾಟಕ ಸಾಹಿತ್ಯ** | **4.4,4.5,4.6** | **6.1,6.2,6.3** | **ESSAY** | **(16-8)8** | **20** |
| **28** | **ಮಂಥರಾ** | **4.3,4.4,4.5,4.6** | **3.1** | **ESSAY** | **(16-8/8** | **20** |
| | **TOTAL** | | | | **80** | **150** |